(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಮ್ಮ ಸ್ನೇಹಿತರಾದ ಮಾನ್ಯ ಮಂತ್ರಿಗಳಾದ ಶ್ರೀ ಖರ್ಗೆಯವರು ಹೇಳುತ್ತಿದ್ದಾರೆ. ಏನೆಂದರೆ ಪ್ರಧಾನಮಂತ್ರಿಯವರನ್ನು ಚುನಾವಣೆ ಮಾಡಬೇಕಾಗಿದ್ದರೂ ಕೂಡಾ ಸಿಂಪಲ್ ಮೆಜಾರಿಟಿ ಸಾಕು ಎಂದು ಒಪ್ಪಿಕೊಂಡಿರುವುದರಿಂದ ಈಗ ತಂದಿರತಕ್ಕಂಥ ವಿಷಯದಲ್ಲಿ ಏನೂ ವಿಶೇಷ ಇಲ್ಲ ಎಂದು ಅರ್ಥ ಬರುವ ಹಾಗೆ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಇದು ಮುಖ್ಯವಾಗಿ ಜಿಲ್ಲಾ ಪರಿಷತ್ತುಗಳು, ಮಂಡಲ ಪಂಚಾಯ್ತಿಗಳು ಮತ್ತು ನ್ಯಾಯ ಪಂಚಾಯತಿಗಳು ಹಾಗೂ ನಗರಸಭೆಗಳಲ್ಲಿ ಮುಖ್ಯವಾಗಿ ಅಭಿವೃದ್ಧಿ ಕಾರ್ಯಗಳಿಗೆ ಸೀಮಿತವಾಗಿರುವುದರಿಂದ ಅಲ್ಲಿ ಉದ್ದೇಶಪೂರ್ವಕವಾಗಿ ಮೂರನೇ ಎರಡರಷ್ಟು ಬಹುಮತ ಇರಬೇಕೆಂದು ತರಲಾಗಿತ್ತು. ಆದರೆ ಇವತ್ತು ವಿಶೇಷವಾಗಿ ಅಧಿಕಾರ ಬದಲಾವಣೆ ಆಯಿತು, ಆಡಳಿತ ಪಕ್ಷ ಬದಲಾವಣೆ ಆಯಿತು ಎಂದು ಹೇಳಿ ಅಲ್ಲಿ ಬೇರೆ ಪಕ್ಷದವರು ಇದ್ದಾರೆ, ಅವರನ್ನು ತೆಗೆಯಬೇಕೆಂಬ ಹಿನ್ನೆಲೆ ಏನಿದೆ, ಉದ್ದೇಶ ಏನಿದೆ ಅದು ದುರುದ್ದೇಶ. ಈ ದುರುದ್ದೇಶವನ್ನು ಹೇಗಾದರೂ ಮಾಡಿ ಜಾರಿಗೆ ತರಬೇಕೆಂದು ಹೇಳಿ ತೋಳ ಕುರಿ ಮರಿ ನ್ಯಾಯ ಇದೆಯಲ್ಲ, ಅದಕ್ಕೆ ಮಾನ್ಯ ಬಸವಲಿಂಗಪ್ಪನವರು ಕಟ್ಟು ಬಿದ್ದು ತಂದಿದ್ದಾರೆ. ಇದನ್ನು ವಿರೋಧಿಸದೆ, ಪ್ರತಿಭಟಿಸದೆ ಗತ್ಯಂತರವೇ ಇಲ್ಲ. ಏತಕ್ಕೆಂದರೆ ನಾಳೆ ಪಾರ್ಲಿಮೆಂಟ್ ಚುನಾವಣೆ ಬರುತ್ತಿದೆ. ಯಾರು ಬರುತ್ತಾರೋ ಗೊತ್ತಿಲ್ಲ. ಇವತ್ತಿನದಿವಸ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಬಸವಲಿಂಗಪ್ಪನವರೇ, ನೀವೇ ಎತ್ತಿದ ಬೋನಿಗೆ ನೀವೇ ಬೀಳುತ್ತಿದ್ದೀರಿ, ನೀವೇ ಹಾಕಿದ ಗಾಳಕ್ಕೆ ನೀವೇ ಸಿಕ್ಕಿ ಹಾಕಿಕೊಳ್ಳುವ ಕಾಲ ಬರುತ್ತದೆ. ಅದು ದೂರ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಿ ಇದನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತೇನೆ.

(ಜನತಾ ಪಕ್ಷದ ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಈಶ್ವರಪ್ಪ : ಬಹುಮತ ಇದೆ ಎಂಬುದನ್ನು ಪೂರ್ಣ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಏನು ಕೆಲಸ ಮಾಡಬೇಕು ಅದನ್ನು ಮಾಡಿ ಹೊರಗೆ ಹೋಗುತ್ತೇನೆ. ಪ್ರಜಾಪ್ರಭುತ್ವದಲ್ಲಿ ಬಹುಮತ ಇದೆ ಎಂಬ ಅಹಂಕಾರದಿಂದ ಈ ಬಿಲ್‌ನ್ನು ತರುತ್ತಿದ್ದೀರಿ. ಇದನ್ನು ಪೂರ್ಣ ಪ್ರತಿಭಟನೆ ಮಾಡಿ ಬರುವಂತಹ ಚುನಾವಣೆಯಲ್ಲಿ ಕರ್ನಾಟಕದ ಜನತೆ ಇವರಿಗೆ ಸರಿಯಾದ ಬುದ್ಧಿ ಕಲಿಸುತ್ತಾರೆ ಎಂದು ಹೇಳುತ್ತಾ, ಪ್ರತಿಭಟನೆ ಮಾಡಿ ನಾನು ಸಹ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಈ ಮಸೂದೆಯನ್ನು ವಿರೋಧ ಮಾಡುತ್ತಿಲ್ಲ, ಆಂದರೆ ಈ ಸರಕಾರಕ್ಕೆ ಬೆಂಬಲ ಕೊಡುತ್ತಿದ್ದೇನೆ ಎಂದು ಅರ್ಥ ಅಲ್ಲ. ಪ್ರಜಾ ಸತ್ತಾತ್ಮಕ ಸೂತ್ರ ಏನಿದೆ ಅದಕ್ಕೆ ಬೆಂಬಲ ಕೊಡುತ್ತಿದ್ದೇನೆ. Simple majority is also democratic rule. ಆದರೆ ಒಂದೇ ಒಂದು ಆತಂಕ ಏನೆಂದರೆ ನಮ್ಮ ಸರಕಾರದವರಿಗೆ ನಾನು ವಿನಂತಿ ಮಾಡಿಕೊಳ್ಳುವುದು ಇದರಿಂದ ಅಸ್ಥಿರತೆ ಬರಬಹುದು. ಆದುದರಿಂದ ನೀವು ಸಮಗ್ರ ಮಸೂದೆ ತರುವಾಗ ಇದನ್ನು ಪಕ್ಷಾಂತರ ಮಸೂದೆಯ ಚೌಕಟ್ಟಿನೊಳಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.